ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2019–20 ದಿನಾಂಕ: 15–10–2019

# PRESS INVITATION

1 Institution of Agricultural Tchnologists (IAT) ,Karnataka State Department of Agriculture, GOK, Deprtment of Watershed Development, Gok, Food Karnataka Ltd and AME Foundation, Bengaluru has organised 'WORLD FOOD DAY-2019'.

Inauguration by:

Sri Prabhash Chandra Ray,
Commissioner,
Watershed Development Department,

Speakers on the Theme:

Dr. H.B. Shivaleela,
Former Professor and Head, Department of Food Science
and Nutrition, UAS, Bengaluru.

Guests of Honour:
Sri B.Y. Srinivas,
Director of Agriculture, Government of Karnataka, Bengaluru.

Sri B,. Shivaraju,
Managing Director, KAPPEC Ltd., Bengaluru.

Presided by:

Prof. V. Veerabhadraiah,
President, IAT, Bengaluru

Date: 16-10-2019 Wednesday, Time 11.00 AM.

Venue : Dr. H.R. Arakeri Auditorium, IAT, #15, Queens Road, Bengaluru-52.

ಪತ್ರಿಕಾ ಪ್ರಕಟಣೆ

# ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆ

ಬೆಂಗಳೂರು, ಅಕ್ಟೋಬರ್ 15 (ಕರ್ನಾಟಕ ವಾರ್ತೆ ) :

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಗಳ ಸಹಯೋಗದಲ್ಲಿ 1985 ರಿಂದಲೂ ಕರ್ನಾಟಕದಲ್ಲಿನ ಕನ್ನಡ ಬಾರದ ಎಲ್ಲಾ ಸರ್ಕಾರಿ ನೌಕರರಿಗಾಗಿ 12 ತಿಂಗಳುಗಳ ಅಂಚೆ ತೆರಪಿನ ಕನ್ನಡ ಶಿಕ್ಷಣ ಯೋಜನೆ ನಡೆಸುತ್ತಿದೆ. ಇದಕ್ಕೆ ಕರ್ನಾಟಕ ಎಲ್ಲಾ ನಗರಸಭೆ, ಕ.ವಿ.ಪ್ರ.ನಿ.ನಿ., ಕೆ.ಎಸ್.ಆರ್.ಟಿ.ಸಿ, ವಿಶ್ವವಿದ್ಯಾಲಯಗಳು ಹಾಗೂ ಶಾಲಾ-ಕಾಲೇಜುಗಳ ಮತ್ತಿತರ ಸರ್ಕಾರಿ ಅನುದಾನ ಪಡೆಯುವ ಸಂಸ್ಥೆಗಳ ನೌಕರರು ಮತ್ತು ಎಲ್ಲ ರಾಷ್ಟ್ರೀಕೃತ ಬ್ಯಾಂಕ್‌ಗಳ ನೌಕರರು ಸಹ ನೋಂದಾಯಿಸಿಕೊಳ್ಳಬಹುದು. ನೋಂದಾಣಿತರು ಶುಲ್ಕ ಪಾವತಿಸುವಂತಿಲ್ಲ.

ಸರ್ಕಾರಿ ನೌಕರರು ಸಂಪರ್ಕ ಶಿಬಿರ ಮತ್ತು ಪರೀಕ್ಷೆಗಳಿಗೆ ಹಾಜರಾದ ಅವರ ಕಚೇರಿಯ ಗೈರು ಹಾಜರಿಯನ್ನು ಅನ್ಯ ಕಾರ್ಯನಿಮಿತ್ತ ಎಂದು ಪರಿಗಣಿಸಲಾಗುವುದು ಹಾಗೂ ಈ ಕನ್ನಡ ಶಿಕ್ಷಣ ಯೋಜನೆಯಡಿ ಉತ್ತೀರ್ಣರಾದವರಿಗೆ ಕರ್ನಾಟಕ ಲೋಕಸೇವಾ ಆಯೋಗದ ಕನ್ನಡ ಪರೀಕ್ಷೆಯಿಂದ ಸಹ ವಿನಾಯಿತಿ ದೊರೆಯಲಿದೆ. ಈಗ ಈ ಯೋಜನೆಯನ್ನು ಸಾರ್ವಜನಿಕರಿಗೂ ವಿಸ್ತರಿಸಲಾಗಿದ್ದು, ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ 18 ರಿಮಧ 50 ವಯೋಮಾನದವರು ಇದರ ಪ್ರಯೋಜನ ಪಡೆದುಕೊಳ್ಳಬಹುದು. ಆಸಕ್ತರು ಭರ್ತಿಮಾಡಿದ ಅರ್ಜಿ ಜೊತೆಯಲ್ಲಿ ರೂ 250/- ಡಿಮ್ಯಾಂಡ್ ಡ್ರಾಫ್ಟ್‌ನ್ನು ಕಳುಹಿಸಿಕೊಡಬೇಕು. ನೋಂದಣಿಸಿದವರಿಗೆ ಇಪ್ಪತ್ತು ಪಾಠಾವಳಿ ಕಳುಹಿಸಿಕೊಡಲಾಗುವುದು. ಶಿಬಿರದ ಅಂತ್ಯದಲ್ಲಿ ಪರೀಕ್ಷೆಗಳನ್ನು ನಡೆಸಲಾಗುವುದು. ಮುಂದಿನ ತರಬೇತಿ ನವೆಂಬರ್ 1 ರಿಂದ ಆರಂಭವಾಗುತ್ತದೆ. ಅರ್ಜಿ ನಮೂನೆ ಮತ್ತು ತರಬೇತಿ ವಿವರಗಳನ್ನು ಪ್ರಭಾರಿ ಅಧಿಕಾರಿ ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆ, ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು - 570 006. ದೂ.ಸಂ. 0821-2345128, ಇವರಿಗೆ ಐದು ರೂಪಾಯಿಯ ಅಂಚೆ ಚೀಟಿಯನ್ನು ಹಚ್ಚಿದ ಸ್ವವಿಳಾಸಿತ ಲಕೋಟೆಯನ್ನು ಕಳುಹಿಸಿ ಪಡೆದುಕೊಳ್ಳಬಹುದು. ಭರ್ತಿಮಾಡಿದ ಅರ್ಜಿಗಳು ಪ್ರಭಾರಿ ಅಧಿಕಾರಿಯವರಿಗೆ ಅಕ್ಟೋಬರ್ 31 ರೊಳಗಾಗಿ ತಲುಪಿಸಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಣೆ ತಿಳಿಸಿದೆ.

# PRESS NOTE

## COMPOSITE CORRESPONDENCE COURSE IN KANNADA

Bengaluru, Oct 15 (Karnataka Information)

The Directorate of Kannada and Culture and the Central Institute of Indian Languages Mysuru are conducting a 12 month Composite Correspondence course in Kannada since November 1, 1985 for employees of the Government for Karnataka who do not know Kannada. This is also open to the Employees of Boards and Corporations, such as KSRTC, KPTCL, Universities, Schools and Colleges and Institutes etc., aided by the Government and Employees of the Nationalised Banks in Karnataka. No Fee is charged for this course from the above Registrants.

Their absence from office to attend the contact programmes and Examinations are treated as "On other Duty" by the Government of Karnataka for his Employees. Those who register and pass the composite correspondence course in Kannada are exempted from passing the Kannada Language Examination of the KPSC.

This Scheme has now been extended to the General Public who wish to join the course. They should be within the age limit 18 to 50 years and should have passed the S.S.L.C. Examinations. They have send DD for Rs 250/- with their applications. They are provided with 20 self instructional learning packets at regular intervals. The course and the contact programme will be followed by examinations at the end.

The course for the thirty fourth batch is scheduled to commence from November 1st 2019. The Registration form prospects can be had by post from officer in charge composite correspondence course in Kannada, Central Institute of Indian Langauges, Manasa Gangotri, Mysuru - 570 006 by sending self addressed stamped (Rs 5/-) Envelop. The duly completed application should reach the officer in charge (CCCK) by October 31st 2019. Tel. No - 0821 - 2345128 says official press release.

## EXTENSION OF LAST DATE FOR ONLINE REGISTRATION

Bengaluru, Oct 15 (Karnataka Information)

Online Registration of All India Sainik School Entrance Examination 2020-21 session has been extended from 10th October 2019 to 31 October 2019.

Interested Candidate can Login to the website www.sainikschoolkodagu.edu.in and online registration website www.sainikschooladmission.in. says official Press Release.

## Celebration of World Food Day 2019

Bengaluru, Oct 15 (Karnataka Information)

The Institution of Agricultural Technologists (IAT), Bengaluru in Collaboration with Department of Agriculture, Watershed Development Department, Food Karnataka Ltd Government of Karnataka, and AME Foundation, Bengaluru is organizing World Food Day 2019 on Wednesday the 16th October 2019 at 11.00 A.M. at Dr. H.R,. Arakeri Auditorium, IAT Bangalore.

The theme prescribed by for the year is "HEALTY DIETS FOR A #ZEROHUNGER WORLD". Smt H,B. Shivalela, Former Professor and Head, Department of Food Science and Nutrition, UAS, Bengaluru and B.M. Leelavathi, Food Technologist, Bengaluru are the speakers on the theme. Prabhash Chandra Ray, Commissioner, Watershed Development Department will inaugurate the programme. B.Y. Srinivas, Director of Agriculture and B. Shivaraju, Managing Director, KAPPEC Ltd, Bengaluru will be guests of honour.

## ಶಿಷ್ಯವೇತನಕ್ಕ ಅರ್ಜಿ ಆಹ್ವಾನ–

ಬೆಂಗಳೂರು, ಅಕ್ಟೋಬರ್ 15 (ಕರ್ನಾಟಕ ವಾರ್ತೆ ) :

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು (ಡಿ.ಎಸ್.ಟಿ.) "ವಿಜ್ಞಾನ ಮತ್ತು ಇಂಜಿನಿಯರಿಂಗ್‌ನಲ್ಲಿ ಪಿಹೆಚ್‌ಡಿ ಸಂಶೋಧನೆಗೆ ಡಿ.ಎಸ್.ಟಿ. ಶಿಷ್ಯವೇತನ" ಎಂಬ ಕಾರ್ಯಕ್ರಮವನ್ನು

ಇಲಾಖೆಯ ಸ್ವಾಯತ್ತ ಸಂಸ್ಥೆಯಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿಯ ಮುಖಾಂತರ ಅನುಷ್ಠಾನಗೊಳಿಸುತ್ತಿದೆ.

2019-20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ಶಿಷ್ಯವೇತನ ಪಡೆಯಲು ವಿಜ್ಞಾನ ಮತ್ತು ಇಂಜಿನಿಯರಿಂಗ್ ವಿಷಯಗಳಲ್ಲಿ ಕರ್ನಾಟಕದಲ್ಲಿರುವ ಮಾನ್ಯತೆ ಪಡೆದ ವಿಶ್ವಿದ್ಯಾಲಯ/ಸಂಸ್ಥೆ/ಕಾಲೇಜುಗಳಲ್ಲಿ ಈಗಾಗಲೇ ಪಿ.ಹೆಚ್.ಡಿ. ಪದವಿಗೆ ನೋಂದಾಯತರಾಗಿರುವ ಅರ್ಹ ಸಂಶೋಧನಾ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಗತ್ಯ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು 16-11-2019 ರೊಳಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗಾಗಿ http://ksteps.karnataka.gov.in ಜಾಲತಾಣಕ್ಕೆ ಭೇಟಿ ನೀಡಬಹುದಾಗಿದೆ ಎಂದು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಪ್ರಕಟಣೆಯಲ್ಲಿ ತಿಳಿಸಿದೆ.

## ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಖಾಸಗಿ ಅಭ್ಯರ್ಥಿಗಳ ನೋಂದಣಿಗೆ ಅವಕಾಶ

ಬೆಂಗಳೂರು, ಅಕ್ಟೋಬರ್ 15 (ಕರ್ನಾಟಕ ವಾರ್ತೆ ) :

ಮಾರ್ಚ್/ಏಪ್ರಿಲ್ 2020 ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳಲು ಈ ಹಿಂದೆ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರ ಕಚೇರಿಯಲ್ಲಿ ನೋಂದಣಿ ಶುಲ್ಕವನ್ನು ನೆಫ್ಟ್‌ಚಲನ್ ಮುಖಾಂತರ ಪಾವತಿಸಿ ನೋಂದಾಯಿಸಿಕೊಳ್ಳಬೇಕಾಗಿತ್ತು. ಪ್ರಸ್ತುತ ಈ ಸಾಲಿನಿಂದ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳಲು ಅಭ್ಯರ್ಥಿಯು ವಾಸಿಸುತ್ತಿರುವ ಪಟ್ಟಣ / ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಅಥವಾ ಮಾನ್ಯತೆ ಪಡದ ಖಾಸಗಿ ಶಾಲೆಗಳ ಮುಖಾಂತರವೇ ನಿಯಮಾನುಸಾರ ನೋಂದಣಿಗಾಗಿ ಅರ್ಜಿ ಸಲ್ಲಿಸಿ ಪರೀಕ್ಷೆ ತೆಗೆದುಕೊಳ್ಳಬಹುದಾಗಿರುತ್ತದೆ.

ಖಾಸಗಿ ಅಭ್ಯರ್ಥಿಯಾಗಿ ಹಾಜರಾಗಲು ಬಯಸುವ ಅಭ್ಯರ್ಥಿಗಳೂ ಆಯಾ ಶೈಕ್ಷಣಿಕ ವರ್ಷದ ಮಾರ್ಚ್-1ನೇ ತಾರೀಖಿಗೆ 15 ವರ್ಷ ವಯೋಮಿತಿ ಹೊಂದಿರಬೇಕು ಹಾಗೂ ನೋಂದಾಯಿಸಿಕೊಳ್ಳಲು 21-10-2019 ಕೊನೆಯ ದಿನವಾಗಿರುತ್ತದೆ. ಖಾಸಗಿ ಅಭ್ಯರ್ಥಿಯಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆ ತೆಗೆದುಕೊಳ್ಳಬಯಸುವ ಅಭ್ಯರ್ಥಿಗಳು ಇದರ ಸದುಪಯೋಗವನ್ನು ಪಡೆಯಬಹುದಾಗಿದೆ ಎಂದು ಕರ್ನಾಟಕ ಪ್ರೌಶ ಶಿಕ್ಷಣ ಪರೀಕ್ಷ ಮಂಡಳಿ ಪ್ರಕಟಣೆ ತಿಳಿಸಿದೆ.